ಏಕೆಂದರೆ ಇಂದು ಜನವರಿ–30, ಹುತಾತ್ಮರ ದಿನಾಚರಣೆಯನ್ನು ಆಚರಣೆ ಮಾಡುತ್ತಿದ್ದೇವೆ, ರಾಷ್ಟ್ರಪಿತನಿಗೆ ನಮನ ಸಲ್ಲಿಸದಿದ್ದರೆ ಲೋಪವಾಗುತ್ತದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:** ಕಡತದಲ್ಲಿ particular ಆಗಿ ಮಹಾತ್ಮ ಗಾಂಧಿಯವರ ಹೆಸರು mention ಆಗಲಿ ಎಂದು ಅವರು ಹೇಳುತ್ತಿದ್ದಾರೆ.

**ಅಧ್ಯಕ್ಷರು:** ಮಾನ್ಯ ಸದಸ್ಯರೆ, ತಪ್ಪನ್ನು ಕ್ಷಮಿಸಬೇಕು. ಮಹಾತ್ಮ ಗಾಂಧಿಯವರ ನೆನಪಿಗೋಸ್ಕರವೇ ಈ ಮೌನವನ್ನು ಆಚರಿಸುವಂತಹುದು. ಆದುದರಿಂದ ಅವರ ಹೆಸರನ್ನು ಅದರ ಜೊತೆಗೆ ಸೇರಿಸಿಕೊಂಡೇ ಹುತಾತ್ಮರ ದಿನಾಚರಣೆ ಎಂದು ಆಚರಣೆ ಮಾಡಬೇಕಾಗುತ್ತದೆ.

## 2. ಪ್ರಕಟಣೆ

**ಅಧ್ಯಕ್ಷರು:** ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 29.01.2014 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1) ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ನಿರಶನ ವಿಧೇಯಕ, 2014

2) ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2014

3) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2014

4) ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ 2014.